# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

## ವರದಿ

### “ಸಾಮಾಜಿಕ ಪರಿವರ್ತನೆಗೆ ಬಸವಣ್ಣನವರು ಶ್ರಮಿಸಿದ್ದು ಉಪಮಾತೀತ: ಶ್ರೀ ಶಿವಣ್ಣ ಇಂದ್ವಾಡಿ
### ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ “ವಚನ ದಿನ”

ಕೊಳ್ಳೇಗಾಲ: 07.09.2018 – ಸಮಾಜದ ಎಲ್ಲ ವರ್ಗದವರಿಗೆ ಸಮಾನತೆ ಕಲ್ಪಸಿಕೊಡಲು ವಿಶ್ವದ ಪ್ರಥಮ ಸಂಸತ್ತು ಎಂದು ಪ್ರಸಿದ್ಧಿಯಾಗಿರುವ ಅನುಭವ ಮಂಟಪ ಕಟ್ಟುವ ಮೂಲಕ ಸಾಮಾಜಿಕ ಪರಿವರ್ತನೆಗೆ ಬಸವಣ್ಣನವರು ಶ್ರಮಿಸಿದ್ದು ಉಪಮಾತೀತ ಎಂದು ಶ್ರೀ ಶಿವಣ್ಣ  ಇಂದ್ವಾಡಿ, ಶಿಕ್ಷಕರು ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಆಶ್ರಯದೊಂದಿಗೆ ಶರಣ ಸಾಹಿತ್ಯ ಪರಿಷತ್ತು, ಕೊಳ್ಳೇಗಾಲ ಘಟಕದ ವತಿಯಿಂದ ಅಖಿಲ ಭಾರತ ಷರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ ಹಾಗೂ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಅಂಗವಾಗಿ ಆಯೋಜಿಸಿದ್ದ **“ವಚನ ದಿನ”**ವನ್ನು ಉದ್ಘಾಟಿಸಿ ಮಾತಾನಾಡಿದರು.

ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ, ಸಮಾಜ ಕಟ್ಟುವ ನಿಟ್ಟಿನಲ್ಲಿ ಇವರು ಸರ್ವರಿಗೂ ಸಮಬಾಳ್ವೆ, ಸರ್ವರಿಗೂ ಸಮಪಾಲು ತರುವ ಸಮಾನತೆಯನ್ನು ಸಾರಿದರು. ವ್ಯಕ್ತಿಗೆ ಬದಲಾಗಿ ಇಡೀ ಸಮಾಜವನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಸ್ಥಿರನನ್ನಾಗಿಸುವಂತಹ ಕಾಯಕವೇ ಕೈಲಾಸ ಎಂಬ ದಿವ್ಯ ಮಂತ್ರವನ್ನು ಕೊಟ್ಟವರು ಶ್ರೀ ಬಸವಣ್ಣನವರು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತಾನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಜನರು ಜನರಿಗಾಗಿ ರಚಿಸುವ ಸಾಹಿತ್ಯವೇ ವಚನ. ಜ್ಞಾನ, ವಿಜ್ಞಾನ ಮತ್ತು ತತ್ವಜ್ಞಾನದ ಸರಿಗಮವೇ ವಚನ. ಇವುಗಳಲ್ಲಿ ಶರಣರು ತಮ್ಮ ಅನುಭವ ಮತ್ತು ಅನುಭಾವ ಎರಡನ್ನೂ ಸೇರಿಸಿರುವುದರಿಂದ ವಚನಗಳು ಕನ್ನಡದ ವೇದ. ವಚನಗಳು ಸುಲಿದಿರುವ ಬಾಳೆಹಣ್ಣಿನಂತೆ ಸುಲಭವಾಗಿ ಅರ್ಥವಾಗುವಂಥವುಗಳು. ಶರಣ ಸಂಸ್ಕೃತಿ ಜಗತ್ತಿನಲ್ಲಿ ಕಂಡರಿಯದ ಅದ್ಭುತ ಸಂಸ್ಕೃತಿ. ಸಮಾಜದ ಅವಗುಣಗಳನ್ನು ತೆಗೆದು ಸಮಾಜವನ್ನು ಉದ್ಧರಿಸುವ ಶಕ್ತಿ ವಚನಗಳಿಗಿವೆ. ಈ ಕಾರಣದಿಂದಲೇ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ್ನು ಸಂಸ್ಥಾಪಿಸಿದರು ಎಂದು ತಿಳಿಸಿದರು.

ದಿವ್ಯ ಸಮ್ಮುಖ ವಹಿಸಿದ್ದ ಗುಂಡೇಗಾಲದ ತೋಟದ ಮಠದ ಷ॥ಬ್ರ॥ಶ್ರೀ ವೃಷಭರಾಜೇಂದ್ರ ಮಹಾಸ್ವಾಮಿಗಳು ಆಶೀರ್ವದಿಸಿ ಎಲ್ಲರೂ ಶರಣರ ತತ್ವಗಳನ್ನು ಅಳವಡಿಸಿಕೊಳ್ಳುವುದಲ್ಲದೆ ವಿದ್ಯಾರ್ಥಿಗಳು ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯಬೇಕು ಎಂದು ತಿಳಿಸಿದರು.

ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜು ಸಿ ಮಾತಾನಾಡಿದರು. ಡಾ ಸಿ ಶಿವರುದ್ರಸ್ವಾಮಿ, ಶ್ರೀ ನಾಗರಾಜು ಎಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಸ್ಮಿತಾ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಗುರುಮಲ್ಲಪ್ಪ, ಶ್ರೀ ಸಂಗನಬಸಪ್ಪ, ಶ್ರೀ ಶಿವಲಿಂಗಸ್ವಾಮಿ, ಡಾ. ಲೋಕೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಖಿಲ ಭಾರತ ಷರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ ಹಾಗೂ ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಅಂಗವಾಗಿ ಆಯೋಜಿಸಿದ್ದ ವಚನ ದಿನವನ್ನು ಉದ್ಘಾಟಿಸಿ ಶ್ರೀ ಶಿವಣ್ಣ ಇಂದ್ವಾಡಿರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು.
ಚಿತ್ರದಲ್ಲಿ ಶ್ರೀ ಎಸ್ ನಾಗರಾಜು, ಪ್ರಾಚಾರ್ಯ ಪ್ರೊ.ಉಮೇಶ, ಷ||ಬ್ರ||ಶ್ರೀ ವೃಷಭರಾಜೇಂದ್ರ ಮಹಾಸ್ವಾಮಿಗಳು, ಡಾ ಸಿ ಶಿವರುದ್ರಸ್ವಾಮಿ, ಶ್ರೀ ನಾಗರಾಜು ಸಿ ರವರನ್ನು ಕಾಣಬಹುದು.



ಅಖಿಲ ಭಾರತ ಷರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ ಹಾಗೂ ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಅಂಗವಾಗಿ ಆಯೋಜಿಸಿದ್ದ ವಚನ ದಿನದಲ್ಲಿ ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಪ್ರೊ.ಉಮೇಶ, ಅಧ್ಯಕ್ಷ ಭಾಷಣ ಮಾಡುತ್ತಿರುವುದು.
ಚಿತ್ರದಲ್ಲಿ ಶ್ರೀ ಶಿವಣ್ಣ ಇಂದ್ವಾಡಿ, ಶ್ರೀ ಎಸ್ ನಾಗರಾಜು, ಷ||ಬ್ರ||ಶ್ರೀ ವೃಷಭರಾಜೇಂದ್ರ ಮಹಾಸ್ವಾಮಿಗಳು, ಡಾ ಸಿ ಶಿವರುದ್ರಸ್ವಾಮಿ, ಶ್ರೀ ನಾಗರಾಜು ಸಿ ರವರನ್ನು ಕಾಣಬಹುದು.



ಸಮಾರಂಭದಲ್ಲಿ ನೆರೆದಿದ್ದ ಶರಣ ಸಾಹಿತ್ಯ ಪರಿಷತ್‌ನ ಎಲ್ಲಾ ಪದಾಧಿಕಾರಿಗಳು ಮತ್ತು ಕಾಲೇಜಿನ ವಿದ್ಯಾರ್ಥಿ ವೃಂದ

